# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 368 |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 07-07-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಎಷ್ಟು ಹೆಕ್ಟರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಸಲಾಗಿದೆ: ಅವು ಯಾವುವು: (ಸಂಪೂರ್ಣ ಮಾಹಿತಿ ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಸಿರಿಧಾನ್ಯ ಬೆಳೆಗಳ ವಿಸ್ತೀರ್ಣವು ಈ ಕೆಳಕಂಡಂತಿರುತ್ತದೆ. (ಕೋಷ್ಟಕ ಕೆಳಗೆ) |

**ವಿಸ್ತೀರ್ಣ – ಹೆಕ್ಟೇರ್ ಗಳಲ್ಲಿ**

| ಸಿರಿಧಾನ್ಯ | 2018-19 | 2019-20 | 2020-21 | 2021-22 | 2022-23 |
|---|---|---|---|---|---|
| ಬರಗು | 5.42 | 35.46 | 3.47 | 3.14 | 1.77 |
| ಊದಲು | 7.46 | 12.69 | 23.85 | 7.62 | 3.41 |
| ಹಾರಕ | 5.61 | 2.72 | 10.26 | 8.71 | 1.15 |
| ಕೊರಲೆ | 98.63 | 180.49 | 109.22 | 50.34 | 17.59 |
| ನವಣೆ | 17.17 | 33.19 | 19.11 | 28.49 | 12.34 |
| ಸಾಮೆ | 2.20 | 7.07 | 3.25 | 15.30 | 0.31 |
| **ಒಟ್ಟು** | **136.49** | **271.62** | **169.16** | **113.60** | **36.57** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಸರ್ಕಾರದ ವತಿಯಿಂದ ರೈತರಿಗೆ ಸಿರಿಧಾನ್ಯ ಬೆಳೆಸಲು ನೀಡಲಾಗುವ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: | ಸರ್ಕಾರದ ವತಿಯಿಂದ ರೈತರಿಗೆ ಸಿರಿಧಾನ್ಯ ಬೆಳೆಸಲು ನೀಡಲಾಗುವ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |
| ಇ) | ಸಿರಿಧಾನ್ಯ ಬಗ್ಗೆ ಹೆಚ್ಚು ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು: | ರಾಜ್ಯದ ಸಿರಿಧಾನ್ಯ ಕ್ಷೇತ್ರವನ್ನು ವಿಸ್ತರಿಸುವ ನಿಟ್ಟಿನಲ್ಲಿ "ರೈತ ಸಿರಿ" ಯೋಜನೆಯನ್ನು 2019-20 ನೇ ಸಾಲಿನಿಂದ ಪ್ರಾರಂಭಿಸಿದ್ದು, ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ. 10,000/- ಗಳಂತೆ ಗರಿಷ್ಠ 2 ಹೆಕ್ಟೇರ್ ಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಇಲ್ಲಿಯವರೆಗೆ ಒಟ್ಟು ರೂ. 81.56 ಕೋಟಿಗಳ ವೆಚ್ಚದಲ್ಲಿ 100601 ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡಲಾಗಿದೆ. |

| | | |
|---|---|---|
| | | ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡುತ್ತಿದ್ದು ಆಸಕ್ತ ರೈತರು/ರೈತ ಗುಂಪುಗಳು/ರೈತ ಉತ್ಪಾದಕಾ ಗುಂಪುಗಳು/ ನವೋದ್ಯಮಿಗಳು/ ಸಾರ್ವಜನಿಕ ಉದ್ದಿಮೆಗಳು ಪ್ರಸ್ತಾವನೆ ಸಲ್ಲಿಸಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿರುತ್ತದೆ.<br><br>ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಪರ್ಕ ಒದಗಿಸಿಕೊಡುವ ನಿಟ್ಟಿನಲ್ಲಿ ಹಾಗು ಗ್ರಾಹಕರಲ್ಲಿ /ಪಾಲುದಾರರಲ್ಲಿ ಅರಿವು ಮೂಡಿಸಲು ಸಾವಯವ ಮತ್ತು ಸಿರಿಧಾನ್ಯ ಕಾರ್ಯಾಗಾರ / ಮೇಳಗಳು / ವಸ್ತು ಪ್ರದರ್ಶನಗಳನ್ನು ಆಯೋಜಿಸಲಾಗುತ್ತದೆ.<br><br>ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಆಯೋಜಿಸಲಾಗುವ ಕೃಷಿ ಮೇಳಗಳಲ್ಲಿ ಸಾವಯವ ಸಿರಿಧಾನ್ಯ ಉತ್ಪನ್ನಗಳ ಪ್ರತ್ಯೇಕ ಪೆವಿಲಿಯನ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಅಲ್ಲದೇ ಇತರೆ ರಾಜ್ಯಗಳಲ್ಲಿ ಆಯೋಜಿಸುವ ಮೇಳಗಳಲ್ಲಿ ಭಾಗವಹಿಸಲಾಗುತ್ತದೆ.<br><br>ಬೆಂಗಳೂರಿನಲ್ಲಿ 2017 ರಲ್ಲಿ ರಾಷ್ಟ್ರ ಮಟ್ಟದ ಹಾಗೂ 2018, 2019 ಮತ್ತು 2023 ರಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳನ್ನು ಆಯೋಜಿಸಲಾಗಿದೆ.<br><br>ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಮೇಳಗಳನ್ನು ಜಿಲ್ಲೆಗಳಲ್ಲಿ ಆಯೋಜಿಸಲಾಗುತ್ತದೆ. |
| ಈ) | ಕಳಪೆ ಸಿರಿಧಾನ್ಯ ಬೀಜ ಸರಬರಾಜು ಮಾಡಿದ ಕಂಪನಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ: ಇಲ್ಲಿವರೆಗೆ ಎಷ್ಟು ಕಂಪನಿಗಳ ವಿರುದ್ಧ ಪ್ರಕರಣ ದಾಖಲಾಗಿದೆ ಅವುಗಳು ಯಾವ ಹಂತದಲ್ಲಿದೆ? | 2022-23ನೇ ಸಾಲಿನಲ್ಲಿ ಸಿದ್ದೇಶ್ವರ ಅಗ್ರೋ ಟ್ರೇಡರ್ಸ್ ತೆಕ್ಕಲಕೋಟೆ, ಸಿರಗುಪ್ಪ, (ಬಳ್ಳಾರಿ ಜಿಲ್ಲೆ) ರವರು ಸರಬರಾಜು ಮಾಡಿದ HMT -001 ನವಣೆ ಬಿತ್ತನೆ ಬೀಜದ ಒಂದು ಮಾದರಿಯು ಕಡಿಮೆ ಗುಣಮಟ್ಟ ಹೊಂದಿರುವುದಾಗಿ ದೃಢಪಟ್ಟಿರುತ್ತದೆ. ಸದರಿ ಸರಬರಾಜುದಾರರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. CC ಸಂಖ್ಯೆ: 73/2022 ಮೊಕದ್ದಮೆಯು ವಿಚಾರಣೆ ಹಂತದಲ್ಲಿದೆ. ಸದರಿ ಪ್ರಕರಣ ಹೊರತುಪಡಿಸಿ ಕಳೆದ 5 ವರ್ಷಗಳಲ್ಲಿ ಯಾವುದೇ ಸಿರಿಧಾನ್ಯ ಬಿತ್ತನೆ ಬೀಜವು ಕಳಪೆಯೆಂದು ವರದಿಯಾಗಿರುವುದಿಲ್ಲ. |

ಸಂಖ್ಯೆ: AGRI/91/ACT/2023

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು